ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯಡ್ಕದ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು

೧೦೭ (೫೧೩) ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಉಡುಪಿ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಉಪನ್ಯಾಸಕರ ಹುದ್ದೆ ಮತ್ತು ಹಿರಿಯಡ್ಕ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ಶೀಘ್ರವಾಗಿ ತುಂಬಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಪಠ್ಯಪುಸ್ತಕಗಳು ಮತ್ತು ಸಮವಸ್ತ್ರಗಳನ್ನು ಪ್ರಾಥಮಿಕ ಶಾಲೆಗಳಿಗೆ ಇನ್ನೂ ಹಂಚಿಕೆಯಾಗಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೀಗಿದ್ದಲ್ಲಿ, ಸರ್ಕಾರವು ಪಠ್ಯಪುಸ್ತಕಗಳು ಮತ್ತು ಸಮವಸ್ತ್ರಗಳನ್ನು ಹಂಚುವುದಕ್ಕೆ ವಿಳಂಬವಿಲ್ಲದೆ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆಯೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ೧. ಉಡುಪಿಯ ಸರ್ಕಾರಿ ಕಿರಿಯ ಕಾಲೇಜಿನ ರಸಾಯನಶಾಸ್ತ್ರದ ಉಪನ್ಯಾಸಕರ ಖಾಲಿ ಹುದ್ದೆಯನ್ನು ಶೀಘ್ರದಲ್ಲಿ ತುಂಬಲಾಗುವುದು.

೨. ಹಿರಿಯಡ್ಕ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಖಾಲಿ ಇರುವ ಕನ್ನಡ ಉಪನ್ಯಾಸಕರ ಹುದ್ದೆಯನ್ನು ಈಗಾಗಲೇ ತುಂಬಲಾಗಿದೆ.

ಇ) ಹೌದು. ಸಮವಸ್ತ್ರ ವಿತರಣೆಯಲ್ಲಿ ಮಾತ್ರ.

ಈ) ಉಚಿತ ಸಮವಸ್ತ್ರವನ್ನು ಕೂಡಲೇ ಹಂಚಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಈಗ ಪಠ್ಯಪುಸ್ತಕಗಳ ಹಂಚಿಕೆ ಪೂರ್ಣಗೊಂಡಿದೆ.

ಶ್ರೀಮತಿ ಮನೋರಮ ಮಧ್ವರಾಜ್.—ಅಧ್ಯಕ್ಷರೇ, ರಾಸಾಯನಿಕಶಾಸ್ತ್ರದ ಉಪನ್ಯಾಸಕರ ಹುದ್ದೆಯನ್ನು ಶೀಘ್ರದಲ್ಲಿ ತುಂಬಲಾಗುವುದು ಎಂದು ಹೇಳಿದ್ದೀರಿ, ಶೀಘ್ರ ಎಂದರೆ, ಒಂದು ನಿರ್ದಿಷ್ಟವಾದ ಸಮಯವನ್ನು ತಿಳಿಸುತ್ತೀರಾ?

ಶ್ರೀ ಡಿ. ಮಂಜುನಾಥ್.—ನಾನು ಆದೇಶ ಕೊಟ್ಟಿದ್ದೇನೆ. ಆದರೆ ಸೈನ್ಸ್ ವಿಭಾಗದಲ್ಲಿ ಕೆಲವು ಸಿಬ್ಬಂದಿಯ ಅಭಾವವು ಇದೆ. ಕಾಂಟ್ರಾಕ್ಟ್ ಬೇಸಿನಮೇಲೆ ನೇಮಕ ಮಾಡುತ್ತಾ ಇದ್ದರು. ಆದರೆ ಈಗ ಹಾಗೆ ಮಾಡುವುದು ಕೂಡ ಸ್ವಲ್ಪ ಕಷ್ಟವಾಗಿದೆ. ಅದಕ್ಕೋಸ್ಕರವಾಗಿ ಇದನ್ನು ಏನಾದರೂ ಮಾಡಿ, ಬೇರೆ ಕಡೆಯಿಂದಲಾದರೂ ವರ್ಗಮಾಡಿ, ಆ ಸ್ಥಳವನ್ನು ತುಂಬಿಸಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಆಜ್ಜೀಬಾಳ್ ಹೆಗಡೆ—ಗೈರುಹಾಜರು.

ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಯ ಕೃಷಿ ಕಾರ್ಮಿಕರ ಬಗ್ಗೆ

೧೧೦ (೪೬೨) ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಕೃಷಿ ಹಾಗೂ ತೋಟಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬ್ರಹ್ಮಾವರದ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ಕೃಷಿ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಈ ಕೇಂದ್ರಕ್ಕೆ ಕಳೆದ ಮೂರು ಆರ್ಥಿಕ ವರ್ಷಗಳಿಂದ ಪ್ರತಿ ವರ್ಷ ಮಂಜೂರಾದ ಹಣ ಎಷ್ಟು? ೧೯೮೬-೮೭ನೇ ಸಾಲಿಗೆ ಮಂಜೂರಾದ ಹಣ ಎಷ್ಟು?

ಇ) ೧೯೮೬ನೇ ಮೇ ತಿಂಗಳಿಂದ ದಿನಗೂಲಿ ಕೆಲಸಗಾರರ ಕೆಲಸ ಸ್ಥಗಿತಗೊಳ್ಳಲು ಕಾರಣವೇನು? ಅದರಿಂದ ಉಂಟಾದ ಆಂದಾಜು ನಷ್ಟವೆಷ್ಟು? ಮತ್ತು ಅದಕ್ಕೆ ಕಾರಣವೇನು?

ಶ್ರೀ ಬಸವರಾಜ ಪಾಟೀಲ್ ಅನ್ನದಾನಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).....

ಅ) ಕಳೆದ ಮೂರು ವರ್ಷಗಳಿಂದ ೧೦ ರಿಂದ ೫೫ ಜನ ಹಂಗಾಮಿ ಕೆಲಸಗಾರರನ್ನು ದಿನಗೂಲಿ ಮೇಲೆ ಪ್ರತಿ ದಿನ ತೆಗೆದುಕೊಳ್ಳಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಿಂದ ಈ ಕ್ಷೇತ್ರಕ್ಕೆ ಮಂಜೂರಾದ ಹಣದ ವಿವರ ಈ ಕೆಳಕಂಡಂತೆ ಇರುತ್ತದೆ :

ವರ್ಷಗಳು	ಮಂಜೂರಾದ ಹಣ (ರೂ. ಲಕ್ಷಗಳಲ್ಲಿ)
೧೯೮೩-೮೪	೩೧.೦೦
೧೯೮೪-೮೫	೧೧.೮೬
೧೯೮೫-೮೬	೧೨.೨೮
೧೯೮೬-೮೭	೧೦.೦೦

ಇ) ಎಲ್ಲಾ ದಿನಗೂಲಿ ಕೆಲಸಗಾರರನ್ನು ಪ್ರತಿ ದಿನವೂ ಈ ಕ್ಷೇತ್ರದಲ್ಲಿ ಕೆಲಸವಿರಲಿ ಅಥವಾ ಇಲ್ಲದಿರಲಿ ಕೆಲಸಕ್ಕೆ ತೆಗೆದುಕೊಳ್ಳಲೇಬೇಕೆಂಬ ದಿನಗೂಲಿ ಕೆಲಸಗಾರರ ಬೇಡಿಕೆಯೇ ಕೆಲಸವು ಸ್ಥಗಿತಗೊಳ್ಳಲು ಕಾರಣವಾಗಿರುತ್ತದೆ. ಒಕ್ಕಲುತನ ಕೆಲಸವು ಋತುಮಾನಗಳಿಗನುಸಾರವಾಗಿ ಮತ್ತು ಅವಶ್ಯಕತೆಗಳಿಗನುಸಾರವಾಗಿ ಇರುವುದರಿಂದ ಎಲ್ಲಾ ದಿನಗೂಲಿ ಕೆಲಸಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳಲು ವಿಶ್ವವಿದ್ಯಾನಿಲಯ ಒಪ್ಪಲು ಸಾಧ್ಯವಾಗಲಿಲ್ಲ. ಅದು ಅಲ್ಲದೆ ಹಣದ ಮಿತಿಯು ಇತ್ತು. ಈ ಸ್ಥಗಿತದಿಂದ ಯಾವ ನಷ್ಟವೂ ಸಂಭವಿಸಿದಂತೆ ಇತರ ವಿಹಾರ್ಡುಗಳಿಂದ ಬಿತ್ತನೆ ಕೆಲಸವನ್ನು ಪೂರೈಸಲಾಗಿದೆ.

ಪ್ರಶ್ನೆ ೧೦೮ (೪೭೪)....ಸದಸ್ಯರು ಹಾಜರಿಲ್ಲ

ಪ್ರಶ್ನೆ ೧೦೯ (೫೭೫)....ಸದಸ್ಯರು ಹಾಜರಿಲ್ಲ

ಶ್ರೀ ಬಸವರಾಜ್.....ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಪ್ರಶ್ನೆ (ಇ)ಗೆ ಉತ್ತರವಾಗಿ ಎಲ್ಲಾ ದಿನಗೂಲಿ ಕೆಲಸಗಾರರನ್ನು ಪ್ರತಿದಿನವೂ ಈ ಕ್ಷೇತ್ರದಲ್ಲಿ ಕೆಲಸವಿರಲಿ ಅಥವಾ ಇಲ್ಲದಿರಲಿ ಕೆಲಸಕ್ಕೆ ತೆಗೆದುಕೊಳ್ಳಲೇಬೇಕೆಂಬ ದಿನಗೂಲಿ ಕೆಲಸಗಾರರ ಬೇಡಿಕೆಯೇ ಕೆಲಸವು ಸ್ಥಗಿತಗೊಳ್ಳಲು ಕಾರಣವಾಗಿರುತ್ತದೆ ಎಂದು ಹೇಳಿದ್ದಾರೆ. ಆವರು ಕೊಟ್ಟಿರುವ ಈ ಉತ್ತರವು ತಪ್ಪು ಎಂದು ಹೇಳುತ್ತೇನೆ. ನಾನು ಮಾನ್ಯ ಸಚಿವರಿಗೆ ಹೇಳುತ್ತೇನೆ. ಆ ಕೆಲಸಗಾರರಿಗೆ ಇವರು ಕೆಲಸವನ್ನು ಬಂದ್ ಮಾಡಿದ್ದರಿಂದ ಅವರು ಈ ಬೇಡಿಕೆಯನ್ನು ಮುಂದೆ ಇಟ್ಟಿದ್ದಾರೆ. ಅವರ ಬೇಡಿಕೆ ಮುಂದಿಟ್ಟಿದ್ದರಿಂದ ಕೆಲಸ ಬಂದ್ ಮಾಡಿಲ್ಲ. ಅಧ್ಯಕ್ಷರೇ, ಅವರ ಗಮನಕ್ಕೆ ತರಬೇಕಾದರೆ ಯಾವುದೇ ಒಂದು ಉದ್ದಿಮೆಯನ್ನು ಪ್ರಾರಂಭಿಸುವಾಗ ಆ ಸ್ಥಳದಲ್ಲಿ ಉದ್ದಿಮೆಯನ್ನು ಪ್ರಾರಂಭ ಮಾಡಲು ಕೆಲವು ಆಶ್ವಾಸನೆಯನ್ನು ಕೊಡುತ್ತಾರೆ. ಹಾಗೆ ಅಲ್ಲಿ ಆ ಉದ್ದಿಮೆಯನ್ನು ಪ್ರಾರಂಭ ಮಾಡುವಾಗ ಅಲ್ಲಿಯ ಸ್ಥಳೀಯರನ್ನು ನಿಮ್ಮನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ ಎಂದು ಹೇಳಿದ್ದರಿಂದ ಈ ಕೃಷಿ ಸಂಶೋಧನಾ ಕೇಂದ್ರಕ್ಕೆ ಅಲ್ಲಿಯ ಗ್ರಾಮಸ್ಥರು ನೆಲವನ್ನು ಕೊಟ್ಟರು. ಹಾಗೆಯೇ ಅಲ್ಲಿ ಅವರನ್ನು ಕೆಲಸಕ್ಕೆ ದಿನಗೂಲಿಯಾಗಿ ತೆಗೆದುಕೊಂಡು ಪ್ರಾರಂಭದಲ್ಲಿ ಕೆಲಸ ಮಾಡಿಸುತ್ತಿದ್ದರು. ಆನಂತರ ಏಕಾಏಕಿ ಆದೇಶವನ್ನು ಬಂದ್ ಮಾಡಿದ್ದಾರೆ. ಕಾರಣ ಅಲ್ಲಿಯ ಅಧಿಕಾರಿ ವರ್ಗದವರ ಅವ್ಯವಹಾರದಿಂದ ಈ ರೀತಿ ಆಗಿದೆ. ಇದನ್ನು ತಪ್ಪಿಗಟ್ಟಿ ಆ ದಿನಗೂಲಿಯವರಿಗೆ ಕೆಲಸವನ್ನು ಕೊಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ

ಕೇಳಿಕೊಳ್ಳುತ್ತೇನೆ. ಮತ್ತು ಇದರಲ್ಲಿ ಏನು ಅವ್ಯವಹಾರ ನಡೆದಿದೆ, ಅದರಿಂದ ಅಲ್ಲಿ ಏನು ನಷ್ಟವಾಗಿದೆ ಅದನ್ನು ತನಿಖೆ ಮಾಡಬೇಕು ಎಂದು ಹೇಳುತ್ತೇನೆ. ಇದನ್ನು ತನಿಖೆ ಮಾಡಿದರೆ ಆವಾಗ ಮಾನ್ಯ ಮಂತ್ರಿಯವರಿಗೆ ತಪ್ಪು ಎಲ್ಲಿ ಇದೆ ಎನ್ನುವುದು ಗೊತ್ತಾಗುತ್ತದೆ. ಮತ್ತು ಇದರಲ್ಲಿ ಏಲ್ಲಿ ನಷ್ಟವಾಗಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಿಲ್ಲ. ಮಾನ್ಯ ಸಚಿವರ ಗಮನಕ್ಕೆ ತರ ಬೇಕಾದರೆ ಮೇ ತಿಂಗಳಿನಲ್ಲಿ ನವ್ಮ ಬೆಳೆಗೆ ಅಂದರೆ ಬಾಳೆಗಿಡಕ್ಕೆ ನೀರನ್ನು ಒದಗಿಸದೆ ಇದ್ದುದರಿಂದ ಅಲ್ಲಿಯ ಬೆಳೆಗೆ ನಷ್ಟವಾಗಿದೆ. ಸುಮಾರು ೨೦-೨೫ ಸಾವಿರ ರೂಪಾಯಿ ಬರುವ ಕಡೆ ೯ ಸಾವಿರ ಆಗಿದೆ. ಇದರಿಂದ ೧೦-೨೦ ಸಾವಿರ ರೂಪಾಯಿ ನಷ್ಟವಾಗಿದೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಯಾವುದೇ ನಷ್ಟ ಇಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಅವರು ಕೂಲಂಕುಷವಾಗಿ ತನಿಖೆ ಮಾಡಿಸ ಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಕೃಷಿ ಸಂಶೋಧನಾ ಕೇಂದ್ರ ಏನು ಇದೆ ಇದು ಲಾಭ ಮಾಡತಕ್ಕದ್ದಲ್ಲ. ಆಲ್ಲದೆ ಋತುಮಾನಕ್ಕನುಸಾರವಾಗಿ ಅಲ್ಲಿ ಕೆಲಸಗಾರರನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಕೆಲಸಕ್ಕೆ ತಕ್ಕಂತೆ ಒಂದು ಸಾರಿ ೧೦ ಜನರನ್ನು ತೆಗೆದುಕೊಳ್ಳಬೇಕಾಗುತ್ತದೆ, ಇನ್ನೊಂದು ಸಾರಿ ೯ ಜನರನ್ನು ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಏನಾದರೂ ಇಂಥಾವರು ಇಂಥ ಕಡೆಯಲ್ಲಿ ತಪ್ಪು ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅಂಥ ಅಧಿಕಾರಿಗಳ ಮೇಲೆ ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವರಾಜ್.—ಈಗಾಗಲೇ ಅದರ ಬಗ್ಗೆ ಒಂದು ಮನವಿಯನ್ನು ಸಲ್ಲಿಸಲಾಗಿದೆ. ಮಾನ್ಯ ಸಚಿವರು ತಿಳಿಸಿದ ಹಾಗೆ ಋತುಮಾನಕ್ಕನುಸಾರವಾಗಿ ೩೦ ಜನ ಮಾಡುವ ಕೆಲಸದ ಕಡೆ ೫-೧೦ ಜನ ತೆಗೆದುಕೊಳ್ಳಲಿ. ಆದರೆ ಅಲ್ಲಿ ಕೆಲಸವನ್ನೇ ನಿಲ್ಲಿಸುವಂಥ ಪ್ರಮೇಯ ಬರುವುದಿಲ್ಲ. ಅಲ್ಲಿ ಕೆಲಸ ವನ್ನು ನಿಲ್ಲಿಸಿದ್ದರಿಂದ ಇದರ ಬಗ್ಗೆ ತನಿಖೆ ಮಾಡಬೇಕು ಎಂದು ನಾನು ಹೇಳಿದ್ದು. ಅಲ್ಲಿ ಕೆಲಸ ನಿಲ್ಲಿಸಿದ್ದರಿಂದ ಏನು ನಷ್ಟವಾಗಿದೆ ಅದರ ಬಗ್ಗೆ ತನಿಖೆ ಮಾಡಬೇಕು ಎಂದು ನಾನು ಮತ್ತೊಮ್ಮೆ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಶಾಸಕರು ಆ ಕಾರ್ಮಿಕರ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದು ಅದರ ಬಗ್ಗೆ ಅಲ್ಲಿಯ ಹಿರಿಯ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಸಂಧಾನ ನಡೆಸಿದ್ದಾರೆ. ೧೪-೭-೧೯೮೬ರಿಂದ ಅಲ್ಲಿ ಕೆಲಸಕ್ಕೆ ಕೆಲಸಗಾರರು ಈಗಾಗಲೇ ಬಂದಿದ್ದಾರೆ. ಇನ್ನೇನಾದರೂ ವಿಚಾರ ಇದ್ದಲ್ಲಿ ಶಾಸಕರು ತಿಳಿಸಿದರೆ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ, ಅದನ್ನು ಪರಿಶೀಲಿಸುತ್ತೇನೆ.

ಪ್ರಶ್ನೆ ೧೧೧ (ಖಿಲಿ)—ಮಾನ್ಯ ಸದಸ್ಯರು ಹಾಜರಿಲ್ಲ

ಪ್ರಶ್ನೆ ೧೧೨ (೧೯೫)

ಮಂಗಳೂರು ತಾಲ್ಲೂಕಿನಲ್ಲಿ ಶಾಲಾ ಕೋಣೆಗಳ ನಿರ್ಮಾಣ ಬಗ್ಗೆ

೧೧೨ (೧೯೫) ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಮಂಗಳೂರು ತಾಲ್ಲೂಕಿನಲ್ಲಿ ೧೯೮೪-೮೫, ೧೯೮೫-೮೬ ರಲ್ಲಿ ಶಾಲಾ ಕೋಣೆಗಳ ನಿರ್ಮಾಣ ಎಷ್ಟು ಆಗಿರುತ್ತದೆ ?

ಆ) ಇನ್ನೂ ಆಗಲು ಬಾಕಿಯಾಗಿರುವುದು ಎಷ್ಟು ?

ಇ) ಇವುಗಳನ್ನು ಯಾವಾಗ ಮಾಡಿ ಪೂರ್ಣಗೊಳಿಸಲಾಗುವುದು?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೧೯೮೪-೮೫ ೩೨
೧೯೮೫-೮೬ ೯

ಆ) ಇಲ್ಲ.